# <u>ವಸತಿನಿಲಯ ಮತ್ತು ವಸತಿಸಹಿತ ಶಾಲೆಗಳಲ್ಲಿ 'ಮಕ್ಕಳ ರಕ್ಷಣೆ' ಯ ಬಗ್ಗೆ ಕೈಗೊಳ್ಳಬೇಕಾದ ಪ್ರಮುಖ ಕಾರ್ಯಗಳು</u>

1. **ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016ರ** ಮಾರ್ಗಸೂಚಿ ಮತ್ತು ಮಾನದಂಡದಂತೆ ಪ್ರತಿ ವಸತಿನಿಲಯ ಮತ್ತು ವಸತಿಶಾಲೆಗಳಲ್ಲಿ **"ಮಕ್ಕಳ ರಕ್ಷಣಾ ನೀತಿ"** ಯನ್ನು ರಚಿಸಿ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆಯುವುದು. (ತಮ್ಮ ಇಲಾಖೆಯ ತಾಲ್ಲೂಕ/ಜಿಲ್ಲಾ ಮಟ್ಟದ ಆಧಿಕಾರಿಗಳ ಮುಖಾಂತರ)

2. **"ಮಕ್ಕಳ ಸಹಾಯವಾಣಿ ಸಂಖ್ಯೆ 1098"** ನ್ನು ಕಡ್ಡಾಯವಾಗಿ ಎಲ್ಲಾ ವಸತಿನಿಲಯ ಮತ್ತು ವಸತಿಶಾಲೆಗಳಲ್ಲಿ ಗೋಡೆ ಬರಹದ ಮುಖಾಂತರ ಪ್ರದರ್ಶಿಸುವುದು.

3. ಎಲ್ಲಾ ವಸತಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ **ಮಕ್ಕಳ ಹಕ್ಕುಗಳು,** ಬಾಲ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1986, ಬಾಲ್ಯ ವಿವಾಹ ನಿಷೇಧ ಕಾಯ್ದೆ–2006, ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ–2012 ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶದ ಬಗ್ಗೆ ತರಬೇತಿಗಳನ್ನು ನಡೆಸುವುದು. ***"ಬಾಲ್ಯ ವಿವಾಹ ಮತ್ತು ಬಾಲಕಾರ್ಮಿಕ ಪದ್ಧತಿಗೆ ಒಳಗಾಗುವುದಿಲ್ಲ ಹಾಗೂ ತಡೆಗಟ್ಟುತ್ತೇನೆ, ಪ್ರಕರಣಗಳು ಕಂಡುಬಂದರೆ ದೂರು ನೀಡುತ್ತೇನೆ"*** ಎಂಬ ಬದ್ಧತೆಯನ್ನು ಪಡೆಯುವುದು.

4. ಪ್ರತಿ ವಸತಿನಿಲಯ ಮತ್ತು ವಸತಿಸಹಿತ ಶಾಲೆಯಲ್ಲಿ **'ಮಕ್ಕಳ ರಕ್ಷಣಾ ಸಮಿತಿ'** (ಸಿ.ಪಿ.ಸಿ) ರಚಿಸುವುದು.

5. ಈ ಸಮಿತಿಯು **3 ತಿಂಗಳಿಗೊಮ್ಮೆ ಸಭೆ ನಡೆಸುವುದು ಕಡ್ಡಾಯ. ವರ್ಷಕ್ಕೆ 4 ಸಭೆ ನಡೆಸಿ, ನಡಾವಳಿ ಪುಸ್ತಕ ನಿರ್ವಹಿಸುವುದು.**

6. **ಪ್ರತಿ ಸಿಬ್ಬಂದಿಯಿಂದ ಬದ್ದತಾ ಸ್ವೀಕಾರ ಪಡೆಯುವುದು** (2 ವರ್ಷಕ್ಕೊಮ್ಮೆ ಬದಲಾಯಿಸುವುದು).

7. ವಸತಿ ನಿಲಯದಲ್ಲಿ ಮಕ್ಕಳಿಗೆ ಲಭ್ಯವಾಗುವಂತೆ **ಸಲಹಾ/ದೂರು ಪೆಟ್ಟಿಗೆ ಅಳವಡಿಸುವುದು**. (50 ಮಕ್ಕಳಿಗೆ 1 ಪೆಟ್ಟಿಗೆ – ಮಕ್ಕಳಿಗೆ ಸುಲಭವಾಗಿ ಸಿಗುವಂತಿರಬೇಕು)

8. **ಸಲಹಾ/ದೂರು ಪೆಟ್ಟಿಗೆ ದೂರುಗಳನ್ನು ತಿಂಗಳಿಗೊಮ್ಮೆ ತೆಗೆದು ವಿಂಗಡಿಸಬೇಕು,** ಆಯಾ ದೂರುಗಳನ್ನು ಆಯಾ ಇಲಾಖೆಗೆ ಹಸ್ತಾಂತರಿಸಬೇಕು.

9. **ಸಲಹಾ/ದೂರು ಪೆಟ್ಟಿಗೆಯ ದಾಖಲೆಯ ಬಗ್ಗೆ ಕೈಗೊಂಡ ಕ್ರಮದ ನಡಾವಳಿ ಪುಸ್ತಕವನ್ನು ನಿರ್ವಹಿಸಬೇಕು.** (ಇದರಲ್ಲಿ ದೂರು ನೀಡಿದ ಮಗುವಿನ ಹೆಸರು ದಾಖಲಿಸಬಾರದು)

10. ವಸತಿಸಹಿತ ಶಾಲೆಯಲ್ಲಿ **'ಮಕ್ಕಳ ಹಕ್ಕುಗಳ ಕ್ಲಬ್'** ಕಡ್ಡಾಯ.

11. ಎಲ್ಲಾ ವಸತಿನಿಲಯ ಹಾಗೂ ವಸತಿಸಹಿತ ಶಾಲೆಗಳ ಮಕ್ಕಳಿಗೆ **ಮಕ್ಕಳ ಗ್ರಾಮ ಸಭೆ ಹಾಗೂ ಗ್ರಾಮ ಪಂಚಾಯತಿಯ 'ಮಕ್ಕಳ ರಕ್ಷಣಾ ಸಮಿತಿ' ಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸುವುದು.**

12. ತಿಂಗಳಿಗೊಂದು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿ ಮಕ್ಕಳಿಗೆ ಜ್ಞಾನಾರ್ಜನೆಯನ್ನು ಮಾಡುವುದರ ಮುಖಾಂತರ **ಸಬಲೀಕರಣಗೊಳಿಸುವುದು ಹಾಗೂ ಮಕ್ಕಳಿಗೆ ಅನಿಸಿಕೆ, ಅಭಿಪ್ರಾಯ, ಸಲಹೆ ಮತ್ತು ದೂರುಗಳನ್ನು ನೀಡುವ ಹಾಗೂ ವರದಿ ಮಾಡುವ ವ್ಯವಸ್ಥೆಯನ್ನು ಬಲಪಡಿಸುವುದು.**